# LATEST DETAILS OF OUR LAYOUTS

**Sandesh Nagar 1st Phase:-** In 46 Acre 14 Guntas of converted land sites have been formed and 100 % sites 610 different size sites were released from NPA and allotted to Members and Associated members and as many as on today 511 sites were registered in favor of Members and Associate Members and balance will be registered shortly.

**Sasndesh Nagar 2nd Phase:-** 24 Acre and 10 Guntas of converted land registered in favor of society among this 22 Acre 19 Guntas 4 Blue print plan has been approved by NPA and drainage and Tar road almost completed balance work i.e Electricity work is in progress and shortly 2nd phase Members and Associate Members will get their sites.

**Sandesh Nagar 3 Phase:-** 13 Acre 38 Guntas of converted land registered in favor of society and 10 Acre 28 Gunta land agreement of sale has been done shortly, Plan will be submitted to NPA and after completion of civil work sites will be allotted.

**Sandesh Bagh Layout:-** 13 Acre 38 Guntas of converted land is in favor of society and among this12 Acre 02 Gunta land blue print plan has been obtained from Anekal development authority. Developer Sri R. G. Tilak is not doing layout work, so that case has been filed at Registrar of co-op society under Section 70 has been filed and case is in progress after case is cleared layout will be formed and sites will be allotted to Members and Associated Members.

**Sandesh Lake Side- 1,2,3, and 4 Phase:-** 78 Acre 20 Guntas of converted land registered in favor of society and 10 Acre 12 Gunta is under GPA sale agreement done and conversion is under progress. Among this 52 Acre 12 Gunta Blue Print Plan has been prepared and Plan submitted to BIAPPA for approval on 15.09.2023 after approval work will be completed and sites will be allotted to Members and Associated Members.

## ಇತ್ತೀಚಿನ ಬಡಾವಣೆಗಳ ಪ್ರಗತಿಯ ವಿವರ:

**ಸಂದೇಶ್ ನಗರ-1ನೇ ಹಂತದ ಬಡಾವಣೆ:-** 46 ಎಕರೆ 14 ಗುಂಟೆ ಭೂಪರಿವರ್ತಿತ ಜಮೀನಿನಲ್ಲಿ ಸಂದೇಶ್ ನಗರ-1ನೇ ಹಂತದ ಬಡಾವಣೆಯನ್ನು ನಿರ್ಮಿಸಿದ್ದು, ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಶೇ 100% ರಷ್ಟು ನಿವೇಶನ ಅಂದರೆ 610 ವಿವಿಧ ನಿವೇಶನಗಳು ಬಿಡುಗಡೆ ಆಗಿದ್ದು, ಎಲ್ಲಾ ವಿವಿಧ ಅಳತೆಯ ನಿವೇಶನಗಳನ್ನು ಸದಸ್ಯರಿಗೆ ಮತ್ತು ಸಹ ಸದಸ್ಯರಿಗೆ ಹಂಚಲಾಗಿದೆ. ಹಾಗೂ ತಹಲ್‌ವರೆವಿಗೂ 511 ವಿವಿಧ ಅಳತೆಯ ನಿವೇಶನಗಳನ್ನು ನೋಂದಣಿ ಮಾಡಿಕೊಡಲಾಗಿದೆ. ಉಳಿಕೆ ನಿವೇಶನಗಳನ್ನು ನೋಂದಣಿ ಮಾಡಿಕೊಡಲು ಕ್ರಮವಿಡಲಾಗುತ್ತಿದೆ.

**ಸಂದೇಶ್ ನಗರ-2ನೇ ಹಂತದ ಬಡಾವಣೆ:-** ಸಂದೇಶ್ ನಗರ-2ನೇ ಹಂತದ ಬಡಾವಣೆಗೆ ಸುಮಾರು 24 ಎಕರೆಗೆ 10 ಗುಂಟೆ ಭೂಪರಿವರ್ತಿತ ಜಮೀನು ಸಂಘಕ್ಕೆ ನೋಂದಣಿ ಆಗಿದ್ದು, ಸುಮಾರು 22 ಎಕರೆ 19 ಗುಂಟೆಯಲ್ಲಿ 4 ನೀಲಿ ನಕ್ಷೆ ನೆಲಮಂಗಲ ಯೋಜನಾ ಪ್ರಾಧಿಕಾರದಿಂದ ಅನುಮೋದನೆ ಆಗಿದ್ದು, ಬಡಾವಣೆಯಲ್ಲಿ ಠಾರ್, ಡ್ರೈನೇಜ್ ಕೆಲಸಗಳು ಬಹುತೇಕ ಮುಕ್ತಾಯವಾಗಿದ್ದು, ಎಲೆಕ್ಟ್ರಿಸಿಟಿ ಕೆಲಸವು ಪ್ರಗತಿಯಲ್ಲಿದೆ. ಉಳಿಕೆ ಕೆಲಸಗಳನ್ನು ಆದಷ್ಟು ಜಾಗ್ರತೆಯಾಗಿ ಮುಗಿಸಿಕೊಡುವುದಾಗಿ ಡೆವಲಪರ್ಸ್ ರವರು ತಿಳಿಸಿರುತ್ತಾರೆ. ಅತೀ ಶೀಘ್ರದಲ್ಲಿಯೇ 2ನೇ ಹಂತದ ಬಡಾವಣೆಯ ಸದಸ್ಯರಿಗೆ ಮತ್ತು ಸಹ ಸದಸ್ಯರಿಗೆ ನಿವೇಶನಗಳನ್ನು ಹಂಚಿ ನೋಂದಣಿ ಕ್ರಮವಿಡಲಾಗುವುದು.

**ಸಂದೇಶ್ ನಗರ-3ನೇ ಹಂತದ ಬಡಾವಣೆ:-** ಸಂದೇಶ್ ನಗರ-3ನೇ ಹಂತದ ಬಡಾವಣೆಗೆ 13 ಎಕರೆ 05 ಗುಂಟೆ ಭೂಪರಿವರ್ತಿತ ಜಮೀನು ನೋಂದಣಿ ಆಗಿದ್ದು ಮತ್ತು 10 ಎಕರೆ 28 ಗುಂಟೆ ಜಮೀನು ಅಗ್ರಿಮೆಂಟ್ ಆಫ್ ಸೇಲ್ ಆಗಿದ್ದು, ಅತೀ ಶೀಘ್ರದಲ್ಲಿಯೇ ನೆಲಮಂಗಲ ಯೋಜನಾ ಪ್ರಾಧಿಕಾರಕ್ಕೆ ನೀಲಿ ನಕ್ಷೆ ಅನುಮೋದಿಸಲು ದಾಖಲಾತಿಗಳನ್ನು ಸಲ್ಲಿಸಲಾಗುವುದು. ನೀಲಿ ನಕ್ಷೆ ಅನುಮೋದನೆ ಆದ ನಂತರ ಬಡಾವಣೆಯ ಕೆಲಸಗಳನ್ನು ಮಾಡಿ, ಆದಷ್ಟು ಜಾಗ್ರತೆಯಾಗಿ ಸದಸ್ಯರಿಗೆ ಮತ್ತು ಸಹ ಸದಸ್ಯರಿಗೆ ನಿವೇಶನಗಳನ್ನು ಹಂಚಲಾಗುವುದು.

**ಸಂದೇಶ್ ಭಾಗ್ ಬಡಾವಣೆ:-** ಸಂದೇಶ್ ಭಾಗ್ ಬಡಾವಣೆಗೆ 13 ಎಕರೆ 38 ಗುಂಟೆ ಭೂಪರಿವರ್ತಿತ ಜಮೀನು ಸಂಘಕ್ಕೆ ನೋಂದಣಿ ಆಗಿದ್ದು, 12 ಎಕರೆ 02 ಗುಂಟೆಗೆ ಆನೇಕಲ್ ಯೋಜನಾ ಪ್ರಾದಿಕಾರದಿಂದ ನೀಲಿ ನಕ್ಷೆ ಅನುಮೋದನೆ ಆಗಿದ್ದು, ಬಡಾವಣೆಯ ಕೆಲಸಗಳನ್ನು ಡೆವಲಪರ್ಸ್ ರವರಾದ ಶ್ರೀ ಆರ್.ಜಿ. ತಿಲಕ್ ರವರು ಮಾಡದೇ ಇದ್ದುದರಿಂದ, ಸಹಕಾರ ಸಂಘಗಳ ಅಪರ ನಿಬಂಧಕರು (ವಸತಿ ಮತ್ತು ಇತರೆ) ರವರ ಕಛೇರಿಯಲ್ಲಿ, ಸಹಕಾರ ಸಂಘಗಳ ಕಾಯ್ದೆ ಕಲಂ 70 ರಡಿಯಲ್ಲಿ ದಾವೆ ಹೂಡಿದ್ದು, ದಾವೆಯು ಪ್ರಗತಿಯಲ್ಲಿರುತ್ತದೆ. ದಾವೆ ಇತ್ಯರ್ಥವಾದ ಮೇಲೆ ಬಡಾವಣೆ ನಿರ್ಮಿಸಲು ಸೂಕ್ತ ಕ್ರಮ ತೆಗೆದುಕೊಂಡು ಸಂಬಂಧಪಟ್ಟ ಸದಸ್ಯರಿಗೆ ಮತ್ತು ಸಹ ಸದಸ್ಯರಿಗೆ ನಿವೇಶನಗಳನ್ನು ಹಂಚಲಾಗುವುದು.

**ಸಂದೇಶ್ ಲೇಕ್ ಸೈಡ್-1, 2, 3 ಮತ್ತು 4ನೇ ಹಂತದ ಬಡಾವಣೆ:-** ಈ ಬಡಾವಣೆಗಳಿಗೆ 78 ಎಕರೆ 20 ಗುಂಟೆ ಭೂಪರಿವರ್ತಿತ ಜಮೀನು ಸಂಘಕ್ಕೆ ನೋಂದಣಿ ಆಗಿದ್ದು, ಸುಮಾರು 10 ಎಕರೆ 12 ಗುಂಟೆ ಜಿ.ಪಿ.ಎ, ಸೇಲ್ ಅಗ್ರಿಮೆಂಟ್, ಭೂಪರಿವರ್ತನೆ ಕಾರ್ಯ ಪ್ರಗತಿಯಲ್ಲಿರುತ್ತದೆ. ಸದರಿ ಜಮೀನುಗಳನ್ನು ಭೂಪರಿವರ್ತನೆ ಮಾಡಿಸಿಕೊಳ್ಳಲಾಗುವುದು ಹಾಗೂ 52 ಎಕರೆ 12 ಗುಂಟೆಗೆ ನೀಲಿ ನಕ್ಷೆ ಅನುಮೋದನೆಗಾಗಿ ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ ದೇವನಹಳ್ಳಿಗೆ ದಿನಾಂಕ 15-9-2023 ರಂದು ಸಲ್ಲಿಸಿದ್ದು, ನೀಲಿ ನಕ್ಷೆ ಅನುಮೋದನೆ ನಂತರ ಬಡಾವಣೆ ಕೆಲಸಗಳನ್ನು ಮಾಡಿ, ನಂತರ ಸಂಘದ ಸದಸ್ಯರಿಗೆ ಮತ್ತು ಸಹ ಸದಸ್ಯರಿಗೆ ಆದಷ್ಟು ಜಾಗ್ರತೆಯಾಗಿ ನಿವೇಶನಗಳನ್ನು ಹಂಚಲು ಕ್ರಮವಿಡಲಾಗುವುದು.